ವಿಷಯ: ಜಿಲ್ಲಾ ಪರಿಷತ್ತಿನಿಂದ ಲೋಕೋಪಯೋಗಿಗೆ ಕಡತ ವರ್ಗಾವಣೆ

ಚುಕ್ಕೆ ಗುರ್ತಿಲದ ಪ್ರಶ್ನೆ ಸಂಖ್ಯೆ ನಂ. 165(402)

ಮಾನ್ಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ಬೆಳ್ಳಾರದ ಬೂದಿಗುಡ್ಡ ಕಾವಲ್ ಕೆರೆಯು ಮೊದಲಿಗೆ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುತ್ತಿದ್ದು ಈಗ ಅದು ಲೋಕೋಪಯೋಗಿ ಇಲಾಖೆಗೆ ವರ್ಗಾವಣೆಯಾಗಬೇಕಾಗಿರುವುದು ನಿಜವೇ?

ಆ) ಇಲಾಖೆಗೆ ವರ್ಗಾಯಿಸಲು ಈ ವಿಳಂಬಕ್ಕೆ ಕಾರಣವೇನು? ಹಾಗೂ ಎಂದು ವರ್ಗಾಯಿಸಲಾಗುವುದು.

ಶ್ರಿ. ಎಂ. ಪಿ. ಪ್ರಕಾಶ್
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಅ) ದಿನಾಂಕ: 3.8.1992ರ ಸರಕಾರಿ ಆದೇಶದಲ್ಲಿ ಈ ಕೆರೆಯನ್ನು ನೀರಾವರಿ ಇಲಾಖೆಗೆ ವರ್ಗಾಯಿಸಿದೆ. ಮತ್ತು ಸಂಬಂಧಪಟ್ಟ ಕಡತಗಳನ್ನು 92-93ರಲ್ಲಿ ಆ ಇಲಾಖೆಗೆ ವರ್ಗಾಯಿಸಲಾಗಿದೆ.

ಆ) ಉದ್ಭವಿಸುವುದಿಲ್ಲ.

ವಿಷಯ : ಪಶುವೈದ್ಯಾ ಚಿಕಿತ್ಸಾ ಕೇಂದ್ರ ಮಂಜೂರಾತಿ

ಚುಕ್ಕೆ ಗುರ್ತಿಲದ ಪ್ರಶ್ನೆ ಸಂಖ್ಯೆ ನಂ. 166(403)

ಶ್ರೀ. ಟಿ.ಜಿ. ಜಯಚಂದ್ರ (ಕಳ್ಳಂಬೆಳ್ಳ)

ಮಾನ್ಯ, ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ.

ಅ) ಚಿಕ್ಕನಾಯಕನ ಹಳ್ಳಿ ತಾಲ್ಲೂಕುಯಳನಡು, ಶಿರಾ ತಾಲ್ಲೂಕು ತುಪ್ಪದಕೋಣ ಮತ್ತು ಗುಬ್ಬಿ ತಾಲ್ಲೂಕಿನ ಆಳಿಲಗಟ್ಟ ಗ್ರಾಮಗಳಲ್ಲಿ ಪಶುವೈದ್ಯ ಚಿಕಿತ್ಸಾಲಯ ಸ್ಥಾಪಿಸಲು ಸರ್ಕಾರದವರು ಯೋಚಿಸಿರುವರೇ?

ಆ) ಸಾಗಿದ್ದಲ್ಲಿ ಈ ಸಾಲಿನಲ್ಲಿ ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?